# ಬುದ್ಧನು ಹೇಳಿದ ಕಥೆ

ಒಬ್ಬ ಗೃಹಸ್ಥನಿದ್ದನು. ಅವನು ತುಂಬ ಶ್ರಮಜೀವಿ. ಅಷ್ಟೇ ಅಲ್ಲದೆ ಧರ್ಮನಿಷ್ಠನೂ ಆಗಿದ್ದನು. ಆದರೆ ಅವನ ಮಗ ಇದಕ್ಕೆ ವಿರುದ್ಧ ಸ್ವಭಾವದವನಾಗಿದ್ದ. ತಂದೆ ಅವನನ್ನು ತಿದ್ದಿ ಸರಿಪಡಿಸುವುದಕ್ಕೆ ಬಹಳ ಪ್ರಯತ್ನಿಸಿದ. ಆದರೆ ಮಗನ ಸಂಸ್ಕಾರದ ಬಲದ ಮುಂದೆ ಇವನ ಉಪದೇಶಗಳಾವುವೂ ಕೆಲಸಮಾಡದಾದವು. ಮಗನಿಗೂ ತಂದೆಯ ಉಪದೇಶವನ್ನು ಕೇಳಿ ಕೇಳಿ ಬೇಸರವಾಗಿರಬೇಕು. ಒಂದು ದಿನ ಮನೆ ಬಿಟ್ಟು ದೇಶಾಂತರ ಹೊರಟುಹೋದ.



ತಂದೆ ಮಗನಿಗಾಗಿ ಎಲ್ಲ ಕಡೆ ಹುಡುಕಿಸಿದ, ಎಲ್ಲ ದೇವರಿಗೂ ಹರಕೆ ಹೊತ್ತ, ಅವನಿಗಾಗಿ ಪರಿತಪಿಸಿದ. ಆದರೆ ಮಗನ ಸುಳಿವೇ ಇಲ್ಲ. ಆದರೆ ಅವನ ಸ್ವಭಾವ ಅವನನ್ನು ಅಳುತ್ತ ಕುಳಿತುಕೊಳ್ಳಲು ಬಿಡಲಿಲ್ಲ. ಅವನು ಮೊದಲಿನಂತೆಯೇ ಕಷ್ಟಪಟ್ಟು ದುಡಿಯ ತೊಡಗಿದ. ಲಕ್ಷ್ಮಿಯ ಕೃಪಾಕಟಾಕ್ಷವೂ ಅವನ ಮೇಲೆ ಆಯಿತು. ಅವನು ದೊಡ್ಡ ಶ್ರೀಮಂತನಾದ. ಅರಮನೆಯಂತಹ ಮನೆಯನ್ನು ಕಟ್ಟಿಸಿದ. ಅನೇಕ ಪರಿಚಾರಕರು ಅವನಿಗೆ. ಎಲ್ಲೆಲ್ಲೂ ಸುಖಸಾಧನಗಳು. ಬಹಳ ದಾನಧರ್ಮ ಮಾಡುತ್ತಿದ್ದ. ಊರಿಗೆ ಊರೇ ಅವನನ್ನು ಗೌರವಿಸುತ್ತಿತ್ತು.

ಇತ್ತ ಮನೆಯನ್ನು ಬಿಟ್ಟುಹೋದ ಮಗನು ಊರೂರು ಅಲೆದನು. ಎಲ್ಲ ಕಡೆಯೂ ಕೆಲಸ ಹುಡುಕಿದನು. ಆದರೆ ಅವನ ಅದೃಷ್ಟ ಒಳ್ಳೆಯದಾಗಿರಲಿಲ್ಲ. ಎಲ್ಲಿಯೂ ಸರಿಯಾದ ಕೆಲಸ ಸಿಗಲಿಲ್ಲ. ಹೋದಡೆಯೆಲ್ಲ ಅವನಿಗೆ ನಿರಾಸೆ. ಹೀಗೆ ಹೊಟ್ಟೆ ಬಟ್ಟೆಗಾಗಿ ಅಲೆಯುತ್ತ ಅವನು ತನ್ನ ತಂದೆಯ ಊರಿಗೇ ಬಂದು ತಲುಪಿದನು. ಅವನ ದೇಹ ಅತ್ಯಂತ ಕೃಶವಾಗಿತ್ತು. ಬಟ್ಟೆ ಹರಕಲು, ಕೆದರಿದ ಕೂದಲು, ಮುಖದಲ್ಲಿ ಕಳೆಯೇ ಇಲ್ಲ, ಹೃದಯದ ವೇದನೆಯನ್ನು ಪ್ರತಿಬಿಂಬಿಸುವ ಕಣ್ಣುಗಳು. ಊರಿನವರಾರಿಗೂ ಅವನ ಪರಿಚಯವಾಗಲಿಲ್ಲ. ಆದರೆ ದೂರದಿಂದಲೇ ಅವನ ತಂದೆ ಅವನನ್ನು ಗುರುತಿಸಿದ. ತನ್ನ ಕೆಲವು ಸೇವಕರನ್ನು ಅವನನ್ನು ಮನೆಗೆ ಕರೆದುಕೊಂಡುಬರಲು ಕಳಿಸಿದ.

ಮಗನ ಮನಸ್ಸಿನಲ್ಲಿ ಸ್ವಲ್ಪ ಆಸೆ ಚಿಗುರಿತು. ಇನ್ನು ತನ್ನ ಸ್ಥಿತಿ ಸುಧಾರಿಸಬಹುದೆಂದು ಅವನು ಭಾವಿಸಿದ. ಅವನು ಸ್ವಲ್ಪವೂ ಹಿಂದೆ ಮುಂದೆ ಯೋಚಿಸದೆ ಆ ಸೇವಕರ ಹಿಂದೆ ಹೊರಟ. ಹಸಿವು ಬಾಯಾರಿಕೆ ಅವನನ್ನು ಅಷ್ಟೊಂದು ಕಾಡುತ್ತಿದ್ದವು. ಹೇಗಾದರೂ ಬದುಕಿದರೆ ಸಾಕು, ಎಲ್ಲಾದರೂ ಒಂದು ಆಶ್ರಯ ಸಿಕ್ಕಿದರೆ ಸಾಕು ಎನ್ನುವಷ್ಟು ಹತಾಶ ಮನೋಭಾವ ಅವನದಾಗಿತ್ತು.

ಸೇವಕರು ಅವನನ್ನು ಕರೆದುಕೊಂಡು ಹೋದರು. ಮನೆಯನ್ನು ಸಮೀಪಿಸುತ್ತಿದ್ದಂತೆ ಅವನಿಗೆ ಸಂದೇಹ ಉಂಟಾಯಿತು. ಅಮೃತಶಿಲೆಯ ಆ ಭವ್ಯಭವನ, ಅನೇಕ ಆಳುಕಾಳುಗಳು, ಸುತ್ತಲೂ ಸುಂದರ ಹೂದೋಟ, ಇವನ್ನೆಲ್ಲ ನೋಡಿ ಇದು ಯಾರದೋ ದೊಡ್ಡ ನಾಯಕನ ಮನೆಯಿರ ಬೇಕೆಂದು ಅವನು ಭಾವಿಸಿದ. “ನನ್ನ ಮೇಲೆ ಇವನಿಗೆ ಏನೊ ಸಂದೇಹ ಇರಬೇಕು. ನನ್ನನ್ನು ಕರೆದುಕೊಂಡು ಹೋಗಿ ಸೆರೆಮನೆಯಲ್ಲಿ ಹಾಕುತ್ತಾರೆ’ ಎಂದು ಅವನಿಗೆ ದಿಗಿಲಾಯಿತು. ಯಜಮಾನನ ಸಮೀಪ ಹೋಗುವುದಕ್ಕೆ ಮುಂಚೆಯೇ ಅವನು ಉಪಾಯದಿಂದ ತಪ್ಪಿಸಿಕೊಂಡು ಹೊರಟು ಹೋದನು.

ಆದರೆ ತಂದೆ ಬಿಡಲಿಲ್ಲ. ಅಷ್ಟು ಹತ್ತಿರ ಬಂದಿದ್ದೂ ಓಡಿ ಹೋದ ಮಗನನ್ನು ಕರೆತರಲು ಎಲ್ಲ ದಿಕ್ಕುಗಳಿಗೂ ತನ್ನ ದೂತರನ್ನು ಕಳಿಸಿದನು. ಅವರು ಅವನನ್ನು ಪತ್ತೆ ಹಚ್ಚಿ ಮತ್ತೆ ಕರೆದುಕೊಂಡು ಬಂದರು. ಈ ಬಾರಿಯೂ ಅವರಿಂದ ತಪ್ಪಿಸಿ ಕೊಳ್ಳಲು ಎಷ್ಟೋ ಪ್ರಯತ್ನಿಸಿದ. ಜೋರಾಗಿ ಕಿರುಚಿಕೊಂಡ. ಗೋಗರೆದು ಅವರ ಕಾಲಿಗೆ ಬಿದ್ದು ಬೇಡಿಕೊಂಡ. ತನ್ನಲ್ಲಿದ್ದ ಅಲ್ಪವೇ ಶಕ್ತಿ ಯನ್ನು ಉಪಯೋಗಿಸಿ ಅವರಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಿದ. ಆದರೆ ಏನೂ ಪ್ರಯೋಜನವಾಗಲಿಲ್ಲ.

ದೂತರು ಅವನನ್ನು ಬಂಗಲೆಗೆ ಕರೆದುಕೊಂಡು ಹೋದರು. ಮಗ ಎಣಿಸಿದ್ದಂತೆ ಅವನಿಗೆ ಯಾವ ತೊಂದರೆಯೂ ಆಗಲಿಲ್ಲ. ಬದಲಾಗಿ ಅಲ್ಲಿ ಅವನಿಗೆ ಒಳ್ಳೆಯ ಊಟ ಉಪಚಾರ ದೊರೆಯಿತು. ಅಲ್ಲಿಯ ಸೇವಕರೆಲ್ಲ ಅವನನ್ನು ಆದರದಿಂದ ಕಾಣತೊಡಗಿದರು. ಯಜಮಾನನ ರೂಪದಲ್ಲಿದ್ದ ತಂದೆ ಮಗನ ವಯಸ್ಸಿನ ಒಬ್ಬ ಸೇವಕನ ಜೊತೆ ಅವನನ್ನು ತೋಟದಲ್ಲಿ ಕೆಲಸಕ್ಕೆ ಹಚ್ಚಿದನು. ಈಗ ಮಗನಿಗೆ ಎಷ್ಟೋ ಸಂತೋಷವಾಯಿತು. ಊಟ ಬಟ್ಟೆಯ ಚಿಂತೆ ಅವನಿಂದ ದೂರವಾಯಿತು.

ಹೀಗೆ ಕೆಲವು ಕಾಲ ಕಳೆಯಿತು. ತಂದೆ ಮಗನನ್ನು ದೂರದಿಂದಲೇ ವೀಕ್ಷಿಸುತ್ತಿದ್ದನು—ಅವನು ಹೇಗೆ ಕೆಲಸ ಮಾಡುತ್ತಾನೆ

ಎಂದು. ಅವನು ಕೆಲಸದಲ್ಲಿ ತುಂಬ ದಕ್ಷ ಮತ್ತು ಪ್ರಾಮಾಣಿಕ ಎಂದು ತುದಿಗೆ ಮನವರಿಕೆಯಾಯಿತು. ಅವನನ್ನು ಈಗ ಆಳುಗಳಿಗೆಲ್ಲ ಮೇಸ್ತ್ರಿಯನ್ನಾಗಿ ನಿಯಮಿಸಿದನು. ಆ ಹುದ್ದೆಯಲ್ಲಿಯೂ ಅವನು ಯಶಸ್ವಿಯಾದುದನ್ನು ಕಂಡು ಅವನನ್ನು ಇಡೀ ತೋಟದ ಮೇಲ್ವಿಚಾರಕನನ್ನಾಗಿ ನಿಯಮಿಸಿದನು. ಹೀಗೆ ಅವನಿಗೆ ಬಡ್ತಿ ದೊರೆಯುತ್ತಾ ಹೋಯಿತು.

ಈಗ ಅವನ ಮುಖಚರ್ಯೆಯೇ ಬದಲಾಯಿತು. ಮೊದಲಿನ ಕಳೆಗುಂದಿದ ಮುಖ ಹೊರಟುಹೋಯಿತು. ಮುಖದಲ್ಲಿ ಗೆಲುವು ಚಿಮ್ಮುತ್ತಿತ್ತು. ಕಣ್ಣಿನಲ್ಲಿ ಉತ್ಸಾಹ ಮಿಂಚುತ್ತಿತ್ತು. ಉತ್ತಮ ಮೈಕಟ್ಟು, ಎತ್ತರದ ನಿಲುವು, ನಡೆನುಡಿಯಲ್ಲಿ ರಾಜ ಗಾಂಭೀರ್ಯ. ಹಿಂದಿನ ದೈನ್ಯತೆ, ಭಿಕ್ಷುಕ ಮನೋಭಾವ ಅವನಿಂದ ದೂರ ವಾದುವು. ಬಾಹ್ಯ ಸನ್ನಿವೇಶಗಳು ವ್ಯಕ್ತಿಯನ್ನು ಹೇಗೆ ಬದಲಾಯಿಸಬಲ್ಲವು ಎಂಬುದಕ್ಕೆ ಅವನೊಬ್ಬ ಉತ್ತಮ ನಿದರ್ಶನವಾಗಿದ್ದನು. ಕೆಲವು ಕಾಲದ ನಂತರ ತಂದೆ ಮಗನನ್ನು ಸಮೀಪಕ್ಕೆ ಕರೆದನು, ತನ್ನ ಸೇವಕರೆಲ್ಲರನ್ನೂ ಸೇರಿಸಿದನು. ತನ್ನ ಸ್ನೇಹಿತರು ಬಂಧು ಬಳಗವನ್ನೂ ಅವನು ಕರೆಸಿದನು. ಅವರೆಲ್ಲರ ಮುಂದೆ ಆ ವ್ಯಕ್ತಿ ತನ್ನ ಮಗನೆಂಬ ರಹಸ್ಯವನ್ನು ಹೊರಗೆಡಹಿದನು. ಈಗ ಮಗನಿಗೆ ತನ್ನ ತಂದೆಯ ಗುರುತು ಸಿಕ್ಕಿತು. ಉಳಿದವರಿಗೆಲ್ಲ ಮಗನ ಪರಿಚಯವಾಯಿತು. ಆಗ ಮಗನ ಆನಂದಕ್ಕೆ ಪಾರವೇ ಇಲ್ಲ. ತಂದೆಯನ್ನು ಆಲಂಗಿಸಿಕೊಂಡು ಆನಂದ ಬಾಷ್ಪದ ಕೋಡಿಯನ್ನೇ ಹರಿಸಿದನು.

ಹೀಗೆ ಹಂತ ಹಂತವಾಗಿ ಮನುಷ್ಯನ ಮನಸ್ಸಿಗೆ ಉನ್ನತ ಸತ್ಯವನ್ನು ಸ್ವೀಕರಿಸಲು ತರಬೇತಿಯನ್ನು ನೀಡಬೇಕು.

✽

# ಕ್ಷಣಿಕವಾದ ಬಾಳಿನಲ್ಲಿ ಕ್ಷಣ ಕ್ಷಣದ ಪ್ರಜ್ಞೆ

ಎಚ್. ಪಾಂಡುರಂಗ ವಿಠಲ

**ವರ್ತಮಾನದಲ್ಲಿ ಇರುವುದನ್ನು ನಾವು ಕಲಿಯಬೇಕು ಎನ್ನುವ ಬುದ್ಧನ ಪ್ರಧಾನ ಉಪದೇಶವನ್ನು ವಿವರಿಸಿರುವ ಶ್ರೀ ಪಾಂಡುರಂಗ ವಿಠಲ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.**

ಕಾಲ ಅನಾದಿ, ಅನಂತ.

ಈ ಅನಂತ ಕಾಲದಲ್ಲಿ ನಮ್ಮ ಚರಿತ್ರೆ, ಕಾಲಮಾಪನ ಇತ್ಯಾದಿಗಳು ತೀರ ಎಳೆಯವು. ಕಾಲ ಅಮೂಲ್ಯ, ಕಳೆದದ್ದನ್ನು ತುಂಬಿಕೊಳ್ಳಲಾರೆವು. ಚರಿತ್ರೆಯಲ್ಲಿ ಉನ್ನತಿಗೇರಿದವರೆಲ್ಲ ಕಾಲವನ್ನು ಸದುಪಯೋಗಪಡಿಸಿಕೊಳ್ಳುವಲ್ಲಿ ನಿಸ್ಸೀಮರು. ಆದರೂ ಕಾಲದ ಸಮರ್ಪಕ ನಿರ್ವಹಣೆ ನಮ್ಮ ಅರಿವಿಗೆ ಮೀರಿದ್ದು. ಕಾಲವನ್ನು ಅರಿತು, ಗೌರವಿಸುವ ಪ್ರಾಮಾಣಿಕ ಪ್ರಯತ್ನವು ನಮ್ಮಲ್ಲಿ ಹೊಸ ಹೊಳಹುಗಳನ್ನು ಮೂಡಿಸಿ, ನಮ್ಮ ಅಗತ್ಯಗಳಿಗೆ ಅನುಗುಣವಾಗಿ ಕಾಲವನ್ನು ಉಪಯೋಗಿಸುವ ಸಾಧ್ಯತೆಗಳನ್ನು ತೆರೆಯುತ್ತದೆ.

ಕಾಲ ಎಂದರೆ ವಿಭಾಗ ಮತ್ತು ಚಲನೆ. ವರ್ತಮಾನವು ನಿಸ್ಸಹಾಯಕವಾಗಿ ಭೂತವಾಗುತ್ತ, ಭವಿಷ್ಯವು ವರ್ತಮಾನಕ್ಕೆ ತೆರೆದುಕೊಳ್ಳುತ್ತ ಹೋಗುವುದು.

ಕಾಲವನ್ನು ಮೀರಿದ ಗಮನವು ಸಹನೆ, ಸಹನೆಯು ಕಾಲವನ್ನು ಅರಿಯುವ ಸಾಧನ. ಅಸಹನೆ ಈ ಅರಿವನ್ನು ಕುಗ್ಗಿಸಿ, ಮನಸ್ಸಿನ ಮೇಲೆ ಒತ್ತಡಕ್ಕೆ ಕಾರಣವಾಗುವುದು.

ಕಾಲವು ನಮಗೆ ದಿನದಲ್ಲಿ ನೀಡುವ ಒಂದು ನಿರ್ದಿಷ್ಟ ಮೊತ್ತ, ಸರಿಯಾಗಿ ಉಪಯೋಗಿಸಿಕೊಂಡವನೇ ಗೆಲ್ಲುವವನು, ಇತರರ ಗೌರವಕ್ಕೆ ಪಾತ್ರನಾಗುವವನು ಮತ್ತು ಮುಂದಿನ ಜನಾಂಗದವರ ನೆನಪಿನಲ್ಲಿ ಉಳಿಯುವವನು.

ಕಾಲದ ನಿರ್ವಹಣೆ ಎಂದರೆ ನಮ್ಮದೇ ಆದ, ನಮ್ಮ ಮನಸ್ಸಿಗೆ ಪೂರ್ತಿ ಇಷ್ಟವಾದ ಗುರಿಯೊಂದನ್ನು ನಿರ್ಧರಿಸಿ ಅದನ್ನು ಸಾಧಿಸಲು ಯತ್ನಿಸುವುದು. ಇದರಿಂದ ಸಾರ್ಥಕತೆ, ಆನಂದ ಲಭ್ಯ. ಬೇರೆಯವರು ವಿಧಿಸುವ ಗುರಿಗಳು ಬೇಸರ, ನಿರಾಶೆ, ಒತ್ತಡ ತರುವುವು. ಗುರಿಯನ್ನು ಸಾಧಿಸಲು ಯೋಜನೆ ಅಗತ್ಯ. ದಿನದ ಇಪ್ಪತ್ತು ಪ್ರತಿಶತ ಕಾಲದಲ್ಲಿ ಮಾನವನು ತನ್ನ ಎಂಬತ್ತು ಪ್ರತಿಶತ ಸೃಷ್ಟ್ಯಾತ್ಮಕ ಕೆಲಸವನ್ನು ಮಾಡಿ ಮುಗಿಸುತ್ತಾನೆಂಬ "ಪರೆಟೋ ನಿಯಮ"(pareto principle)ವನ್ನು ಗಮನಿಸಿ—ದೇಹ ಮನಸ್ಸುಗಳು ಪುಟಾಗ್ರತೆಯಲ್ಲಿರುವ ಆ ಕೆಲ ಗಂಟೆಗಳ ಸಮಯವನ್ನು ವ್ಯರ್ಥವಾಗಲು ಬಿಡಬಾರದು.

* * *

ಶಾಂತಿಗಾಗಿ, ಆನಂದಕ್ಕಾಗಿ ನಾವು ಪ್ರಯತ್ನಿಸಬೇಕಾಗಿಲ್ಲ. ಇಲ್ಲೇ, ಈಗಲೇ ಇರುವ ಶಾಂತಿಯನ್ನು ಅರಿವಿಗೆ ತಂದುಕೊಂಡು ಅನುಭವಿಸಬೇಕು. ಅನುಭವ ವರ್ತಮಾನದಲ್ಲಿ ಮಾತ್ರ ಇದೆ. ನಾವು ನಗುವ, ಉಸಿರಾಡುವ, ತಿನ್ನುವುದೇ ಮೊದಲಾದ ದಿನನಿತ್ಯದ ಕೆಲಸಗಳನ್ನು ನಮ್ಮ ಸುತ್ತ ಇರುವ ಶಾಂತಿಯನ್ನು ಅನುಭವಿಸುತ್ತ ಮಾಡಬಹುದು. ಆದರೆ, ನಾವು ಜೀವಿಸಲು ಏನನ್ನಾದರೂ ಮಾಡುವುದರಲ್ಲಿ ಮಾತ್ರ ನಿಸ್ಸೀಮರು—ಜೀವಂತವಾಗಿರುವುದನ್ನು ಅನುಭವಿಸುವುದರಲ್ಲಿ ಅಲ್ಲ. ಒಂದು ಡಿಗ್ರಿ ಮಾಡಲು ಹತ್ತು ವರ್ಷ ತ್ಯಾಗ ಮಾಡಬಲ್ಲೆವು; ಒಂದು ಕೆಲಸ, ಮನೆ, ಕಾರು ಸಂಪಾದಿಸಲು ತುಂಬಾ ಕಷ್ಟಪಡಬಲ್ಲೆವು.